## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್

## ಸಿ. ಸಿ. ನಂ.**1038/2024**

| | | | | |
|---|---|---|---|---|
| ಸಾಕ್ಷಿಧಾರರ ಹೆಸರು | : | ಕುಮಾರಸ್ವಾಮಿ ಹಿರೇಮಠ | ಪಿಡಬ್ಲ್ಯೂ | 3 |
| ತಂದೆ:ಗಂಡನ ಹೆಸರು | : | ಅಜ್ಜಯ್ಯ | ಸಿಡಬ್ಲ್ಯೂ | 5 |
| ವಯಸ್ಸು | : | 39 ವರ್ಷ | | |
| ಉದ್ಯೋಗ | : | ಕಂಪ್ಯೂಟರ್ ಕೆಲಸ | | |
| ವಾಸಸ್ಥಳ | : | ಬಮ್ಮನಹಳ್ಳಿ | | |

ದಿನಾಂಕ **24.01.2025** ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ

ಚಾಸಾ-1 ನನ್ನ ತಾಯಿ. ಚಾಸಾ-4 ನನ್ನ ತಂದೆ. ಆರೋಪಿ ನನ್ನ ಸಂಬಂಧಿ. ದಿ: 07.10.2023 ರಂದು ಸಾಯಂಕಾಲ 6-30 ರಿಂದ 7.00 ಗಂಟೆ ಸುಮಾರಿಗೆ ಯಳ್ಳೂರು ಗ್ರಾಮದಲ್ಲಿರುವ ನಮ್ಮ ಮನೆಯಲ್ಲಿ ನನ್ನ ತಾಯಿ ಒಬ್ಬಳೇ ಇದ್ದಾಗ ಆರೋಪಿ ಇನ್ನೂ ಇಬ್ಬರ ವ್ಯಕ್ತಿಯೊಂದಿಗೆ ಕಾರಿನಲ್ಲಿ ಬಂದಿದ್ದರು. ನನ್ನ ತಾಯಿಗೆ ಬಾಯಿ ಮಾಡಿ ನಿನ್ನ ಮಗ ಎಲ್ಲಿದ್ದಾನೆ ಅಂತಾ ಕೇಳಿ ಗಲಾಟೆ ಮಾಡಿ ನನ್ನ ತಾಯಿಗೆ ಎಳೆದಾಡಿ ಕೂದಲು ಜಗ್ಗಿ, ದೂಡಾಡಿದರು. ಆಗ ಗಲಾಟೆ ಕೇಳಿ ಆಜುಬಾಜು ಜನರಾದ ಚಾಸಾ-6 ರಿಂದ 9 ರವರು ಬಂದು ಜಗಳ ಬಿಡಿಸಲು ಪ್ರಯತ್ನಿಸುತ್ತಿದ್ದರು, ಆಗ ನನ್ನ ತಂದೆ ಬಂದರು. ಅವರನ್ನು ಸಹ ದೂಡಾಡಿ ಕೆಳಗೆ ಕೆಡವಿದರು, ಅವರ ಕಾಲಿಗೆ ಪೆಟ್ಟಾಗಿತ್ತು. ಅಷ್ಟರಲ್ಲಿ ನಾನು ಬಂದೆ. ನಮ್ಮ ಜೊತೆಗೆ ಏನು ವ್ಯವಹಾರ ಇಲ್ಲ ನಮ್ಮ ತಂದೆ ತಾಯಿಗೆ ಯಾಕೆ ತೊಂದರೆ ಕೊಡುತ್ತಿದ್ದೀಯಾ ಅಂತಾ ಆರೋಪಿಯನ್ನು ಕೇಳಿದೆನು. ನನ್ನ ತಂದೆ ತಾಯಿಗೆ ಕೆಟ್ಟ ಕೆಟ್ಟ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. ನಿಮ್ಮನ್ನು ಬಿಡುವುದಿಲ್ಲ, ಹೆಚ್ಚು ಕಡಿಮೆ ಯಾದರೆ ನಿಮ್ಮನ್ನು ಕೊಲೆ ಮಾಡುತ್ತೇನೆ ಅಂತಾ ಹೇಳಿದರು. ರಾಜಶೇಖರ ಮತ್ತು ಅವರ ಹೆಂಡತಿ ಶಿಲ್ಪಾ ಮತ್ತು ಅವರ ಅಕ್ಕ ನಾಗರತ್ನ ಅವರ ಮೇಲೆ ಸುಳ್ಳು ಕೇಸು ಹಾಕಿ ನಿಮ್ಮನ್ನು ಯಾವ ಕಾರಣಕ್ಕೂ ಬಿಡುವುದಿಲ್ಲ, ಅಂತಾ ಹೇಳಿದರು. ಅಷ್ಟರಲ್ಲಿ ಜನ ಸೇರಿದ್ದಕ್ಕೆ ಕಾರಿನಲ್ಲಿ ಮರಳಿ ಹೋದರು. ನನ್ನ ತಾಯಿಗೆಗೆ ಪೆಟ್ಟಾಗಿ, ಬಿ ಪಿ ಸುಗರ್ ವೆರಿಯೆಷನ್

ಆಗಿತ್ತು. ಆಸ್ಪತ್ರೆಯಿಂದ ಬಂದ ನಂತರ ಮಾರನೇ ದಿನ ದೂರು ಸಲ್ಲಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ ಎಸ್ ಕೆ ವಕೀಲರಿಂದಃ

ಕಾಲಕಾವಕಾಶ ಕೋರಿರುತ್ತಾರೆ ಪಾಟೀ ಸವಾಲಿಗೆ ಮುಂದೂಡಲಾಯಿತು.

**(** ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್